## ಮಾತು-ಕತೆ

ಇವತ್ತು ಸಾಹಿತ್ಯ (ದಲಿತ–ಬಂಡಾಯ, ಪ್ರಗತಿಶೀಲ ಚಳವಳಿ ಸೇರಿದಂತೆ) ಎನ್ನುವುದು ಸಾಮಾಜಿಕ ಪ್ರಜ್ಞೆಯ, ಸಾಮಾಜಿಕ ಪರಿವರ್ತನೆಯ, ಸಮಾಜದ ವಿವಿಧ ವರ್ಗಗಳನ್ನು ದಾಖಲು ಮಾಡಬೇಕು ಎನ್ನಬೇಕೆಂಬ ಪ್ರಯತ್ನ ಹಾಗೂ ಕಲೆ ಎನ್ನುವ ತಿಳಿವಳಿಕೆಯನ್ನು ಪಡೆದುಕೊಂಡಿದೆ. ಈ ಬದಲಾವಣೆ ನೀವು ಬಲ್ಲ ಸಾಹಿತ್ಯ ಎನ್ನುವ ಸಂಸ್ಥೆಯಲ್ಲಿ ಯಾವ ಬದಲಾವಣೆಯನ್ನು ತಂದಿತು? ಸಾಹಿತ್ಯ ಎನ್ನುವುದೇ ನಲವತ್ತು ಐವತ್ತು ವರ್ಷಗಳಲ್ಲಿ ಕಾಲದ ಜೊತೆಗೆ ಬದಲಾಗುತ್ತದೆಯಾ, ಆಗಬೇಕಾ ಅಥವಾ ಕಾಲದ ಒತ್ತಡಗಳನ್ನು, ಚಳವಳಿಗಳ ಒತ್ತಾಯವನ್ನು ಮೀರಿ ನಿಲ್ಲುವ ಗುಣ ಸಾಹಿತ್ಯಕ್ಕೆ ಇರುತ್ತಾ? ಸಾಹಿತ್ಯ ಎನ್ನುವುದು ಸಾಹಿತ್ಯವಲ್ಲದೆ ಬೇರೆ ಏನೂ ಆಗಬೇಕಿಲ್ಲ ಎನ್ನುವುದು ಒಂದು ತುದಿಯಾದರೆ, ಸಾಹಿತ್ಯ ಎನ್ನುವುದು ಸಾಹಿತ್ಯ ಆಗುವುದರ ಜೊತೆಗೆ ಬೇರೆ ಏನೇನೋ ಆಗಬೇಕು ಎನ್ನುವ ನಂಬಿಕೆ ಇದೆಯಲ್ಲ – ಈ ಎರಡು ಸ್ಥಿತಿಗಳನ್ನು ನೋಡಿದಾಗ ನಿಮಗೆ ಏನನ್ನಿಸುತ್ತೆ. ಇದು ಅತಿರೇಕವಾ ಅಥವಾ ಇರಬೇಕಾದುದೇ ಹೀಗೆಯಾ?''

ಎಚ್‌ಎಸ್‌ಆರ್ ಮಂಡಿಸಿದ ದೀರ್ಘ ಪ್ರಮೇಯಕ್ಕೆ ದಿವಾಕರ್ ಮತ್ತೆ ತಮ್ಮ ಬದುಕಿನಿಂದಲೇ ಉತ್ತರವನ್ನು ಹುಡುಕುವ ಪ್ರಯತ್ನ ನಡೆಸಿದರು. ''ಪ್ರಸಿದ್ಧ ಲೇಖಕರನ್ನು ಪರಿಚಯ ಮಾಡಿಕೊಳ್ಳುವುದು ಹಾಗೂ ಅವರೊಂದಿಗೆ ಒಡನಾಡುವುದು ನನಗೆ ಮೊದಲಿನಿಂದಲೂ ಇಷ್ಟ. ಅನಕೃ ಮನೆಗೆ ಹೋಗ್ತಿದ್ದೆ. ವಿ.ಸೀ. ಮನೆಗೆ ಹೆಚ್ಚು ಹೋಗ್ತಿದ್ದೆ. ಅವರದು ಅಸಾಧಾರಣ ಪಾಂಡಿತ್ಯ. ಲಂಡನ್‌ನ ನಕ್ಷೆ ಬಿಡಿಸಿ ತೋರಿಸುತ್ತಿದ್ದರು. ಕಿಂಗ್ಸ್ ಕೋರ್ಟ್ ಇಲ್ಲಿದೆ, ಟ್ರಫಾಲ್ಗರ್ ಸ್ಕ್ವಯರ್ ಇಲ್ಲಿದೆ ಎಂದು ಲಂಡನ್‌ನ ಲ್ಯಾಂಡ್‌ಮಾರ್ಕ್‌ಗಳನ್ನು ವಿವರಿಸುತ್ತಿದ್ದರು. ಆಶ್ಚರ್ಯದ ಸಂಗತಿ ಎಂದರೆ ಅವರೆಂದೂ ಲಂಡನ್ ನೋಡಿದವರಲ್ಲ. ಇಂಗ್ಲಿಷ್ ಕಾದಂಬರಿಗಳಲ್ಲಿ ಬರುವ ವಿವರಗಳ ನೆನಪಿನ ಮೂಲಕವೇ ಲಂಡನ್ ಅರಿತುಕೊಂಡಿದ್ದರು. ಪಿಯುಸಿಗೆ ಬಂದ ಮೇಲೆ ಕಾರಂತರನ್ನು ಓದಿದ್ದು. ಮದರಾಸಿಗೆ ಬಂದಮೇಲೆ, ಆ ಕಾಲದ ಪ್ರಸಿದ್ಧ ಮಾಸಿಕ 'ಎನ್‌ಕೌಂಟರ್' ಪತ್ರಿಕೆ ತರಿಸಿಕೊಳ್ಳುತ್ತಿದ್ದೆ. ಅದನ್ನು ಸೂಕ್ಷ್ಮವಾಗಿ ಓದಿದರೆ, ಈ ಜಗತ್ತಿನ ಸಾಮಾಜಿಕ–ರಾಜಕೀಯ ಘಟನೆಗಳ ಜೊತೆಗೆ ಸಾಂಸ್ಕೃತಿಕ ಆಗುಹೋಗುಗಳೂ ತಿಳಿಯುತ್ತಿದ್ದವು. ವಿಶ್ವದ ವಿವಿಧ ಭಾಗಗಳಲ್ಲಿ, ವಿವಿಧ ಭಾಷೆಗಳ ಸಾಹಿತ್ಯದಲ್ಲಿ ಏನಾಗುತ್ತಿದೆ ಎನ್ನುವ ಆಸಕ್ತಿ ಮೊಳೆಯಿತು. ಈ ಅರಿವಿನ ನಂತರ ಕನ್ನಡ ಸಾಹಿತ್ಯವನ್ನು ಮತ್ತೆ ಓದತೊಡಗಿದಾಗ ಅನ್ನಿಸಿದ್ದು – 'ಕಲೆಗಾಗಿ ಕಲೆ' ಎನ್ನುವುದು ಒಂದು ಹಂತದವರೆಗೂ ಮಾತ್ರ ಸರಿ. ಅಲ್ಲಿಂದಾಚೆಗೆ ಸಾಮಾಜಿಕ ಆಯಾಮಗಳಿಲ್ಲದ ಕಲೆ ನೋಡಲಿಕ್ಕೆ ಮತ್ತು ಓದಲಿಕ್ಕೆ ಚೆನ್ನಾಗಿರುತ್ತದೆ. ಆದರೆ ಅದಕ್ಕೆ ಇನ್ನೂ ಏನೋ ಬೇಕು ಅನ್ನಿಸುತ್ತೆ. ಒಂದು ಒಳ್ಳೆಯ ಕೃತಿ ಯಾವಾಗಲೂ ಸಮಕಾಲೀನವಾಗಿರುತ್ತದೆ. ಕಳೆದ 25–30 ವರ್ಷಗಳಲ್ಲಿ ನಮ್ಮ ಓದುವ ಕ್ರಮವೇ ಬದಲಾಗಿದೆ. ಆಗ ಅಡಿಗರನ್ನು ಓದುತ್ತಿದ್ದ ಹಾಗೆ ಈಗ ಸಾಧ್ಯವಿಲ್ಲ. 20ನೇ ಶತಮಾನದ ಉತ್ತರಾರ್ಧದ ರಾಜಕೀಯವನ್ನು ಗಮನದಲ್ಲಿ ಇಟ್ಟುಕೊಂಡು ಅಡಿಗರನ್ನು ಓದಿದರೆ ಈಗ ನಮಗೆ ಸಿಗುವ ಅಡಿಗರು ಬೇರೆಯೇ. ಈ ಹಿನ್ನೆಲೆಯಲ್ಲಿ ನನಗೆ ಮೊದಲಿನ ತೀವ್ರತೆಯಲ್ಲಿ ನರಸಿಂಹಸ್ವಾಮಿ ಅವರನ್ನು ಓದುವುದು ಸಾಧ್ಯವಿಲ್ಲ. ಈಗ ನನಗೆ, ನರಸಿಂಹಸ್ವಾಮಿ ಅವರ ಸಾಹಿತ್ಯವನ್ನು ಬಾಲಮುರಳಿ ಹಾಡಿದ್ದರೆ ಹೇಗಿರುತ್ತದೆ ಎನ್ನುವ ರೀತಿಯ ಕಲ್ಪನೆಗಳಷ್ಟೇ ಹೊಳೆಯುತ್ತವೆ. ಕಲೆಗಾಗಿ ಕಲೆ ಎನ್ನುವುದು ಅಷ್ಟೇ ಅಲ್ಲ, ಸಾಹಿತ್ಯಕ್ಕೆ ಸಾಮಾಜಿಕ ಆಯಾಮ ಇರುವುದು ಬಹಳ ಮುಖ್ಯ ಎನ್ನುವುದು ನನ್ನ ನಂಬಿಕೆ.''

ಮಾತು ಮುಂದುವರೆದುದು ಓದಿನ ಮೇಲೆ ಇರುವ ಒತ್ತಡಗಳ ಬಗ್ಗೆ. ಅದನ್ನು ಎಚ್‌ಎಸ್‌ಆರ್ ವಿವರಿಸಿದ್ದು ಹೀಗೆ. ''ಯಾವುದನ್ನು ಹೊರಗಿಡಬೇಕು, ಸ್ವೀಕರಿಸಬೇಕು ಎನ್ನುವ